**ಗುಮಾಸ್ತ:** ಮದುವೆಯಾಗಿರುವ ಗಂಡಸರನ್ನೇ ಯಾಕೆ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದೀರಿ?
**ಬಾಸ್:** ಅವಮಾನವನ್ನು ಹೇಗೆ ಸಹಿಸಿಕೊಳ್ಳಬೇಕು ಎಂಬುದು ಮದುವೆಯಾದ ಗಂಡಸರಿಗೆ ಚೆನ್ನಾಗಿ ಗೊತ್ತಿರುತ್ತದೆ. ಜೊತೆಗೆ, ಮನೆಗೆ ಬೇಗ ಹೋಗಬೇಕೆನ್ನುವ ಧಾವಂತ ಅವರಿಗೆ ಇರುವುದಿಲ್ಲ.




ಕಳೆದ ತಿಂಗಳ ಮನೆಯ ಖರ್ಚಿನ ಲೆಕ್ಕ ಕೊಡು ಎಂದು ಪತಿ ಪತ್ನಿಯನ್ನು ಕೇಳಿದ. ಕೂಡಲೇ ಲೆಕ್ಕ ಬರೆಯಲು ಮುಂದಾದ ಪತ್ನಿ ನಡುನಡುವೆ, '₹1500 ಎ... ಹೋ... ಅ... ದೇ... ಗೊ...', '₹800 ಎ... ಹೋ... ಅ... ದೇ... ಗೊ...' ಅಂತ ಜೋರಾಗಿ ಹೇಳುತ್ತಾ ಬರೆಯತೊಡಗಿದಳು.
**ಪತಿ:** 'ಎ... ಹೋ... ಅ... ದೇ... ಗೊ...' ಅಂದರೆ ಏನು?
**ಪತ್ನಿ:** 'ಎಲ್ಲಿ ಹೋಯಿತು ಅಂತ ದೇವರಿಗೆ ಗೊತ್ತು' ಅಂತ ಅರ್ಥ.

**ಯುವಕ:** ನಾನು ನಿಮ್ಮ ಮಗಳನ್ನು ಮದುವೆ ಆಗಲು ಬಯಸಿದ್ದೇನೆ.
**ಹುಡುಗಿಯ ತಂದೆ:** ನಿನಗೆ ಸಂಬಳ ಎಷ್ಟು ಬರುತ್ತದೆ?
**ಯುವಕ:** ಇಪ್ಪತ್ತು ಸಾವಿರ ರೂಪಾಯಿ.
**ಹುಡುಗಿಯ ತಂದೆ:** ತಿಂಗಳಿಗೆ 25 ಸಾವಿರ ರೂಪಾಯಿ ಪಾಕೆಟ್ ಮನಿ ಕೊಡುತ್ತೇನೆ. ನಿನ್ನ ಸಂಬಳ ಅವಳ ಖರ್ಚಿಗೆ ಸಾಲಲ್ಲ.
**ಯುವಕ:** ಅದರ ಜೊತೆಗೆ 10 ಸಾವಿರ ಹಾಕಿ ಕೊಡಿ. ಹೇಗೋ ನಾನೂ ಜೀವನ ಸಾಗಿಸ್ಬಿಡ್ತೀನಿ ಅದರಲ್ಲೇ.




**ಗುಂಡ:** ಅತಿಥಿಗೆ ಗ್ರೀನ್ ಟೀ ಕುಡಿಸುವುದರಿಂದ ಆಗುವ ಲಾಭಗಳೇನು?
**ಸುಬ್ಬ:** 1. ಟೀಯೊಂದಿಗೆ ಬಿಸ್ಕತ್ ಕೊಡುವುದು ತಪ್ಪುತ್ತದೆ. 2. ಅತಿಥಿ ಇನ್ನೊಂದು ಕಪ್ ಗ್ರೀನ್ ಟೀ ಕೊಡಿ ಅಂತ ಕೇಳೋದೂ ತಪ್ಪುತ್ತೆ. 3. ಹಾಲಿನ ಖರ್ಚು ಉಳಿಯುತ್ತೆ. 4. ಬಹುಶಃ ನಿಮ್ಮ ಮನೆಗೆ ಮತ್ತೊಮ್ಮೆ ಅವರು ಬರುವುದು ತಪ್ಪುತ್ತದೆ.

**ಪತ್ನಿ:** ನಿಮ್ಮ ಗೆಳೆಯನಿಗೆ ತಲೆ ಕೆಟ್ಟಿದ್ಯಾ? ಅವನು ಓರ್ವ ಹಟಮಾರಿ ಹಾಗೂ ಮೂರ್ಖ ಹುಡುಗಿಯನ್ನು ಮದುವೆಯಾಗುತ್ತಿದ್ದಾನೆ. ನೀವು ಅವನನ್ನು ತಡೆಯಬಾರದೆ?
**ಪತಿ:** ನಾನ್ಯಾಕೆ ತಡೆಯಬೇಕು. ನಾನು ಮದುವೆಯಾಗುವಾಗ ಅವನು ನನ್ನನ್ನು ತಡೆದಿದ್ದನೆ? ಇಲ್ವಲ್ಲ. ಅದಕ್ಕೆ ನಾನೂ ತಡೆಯುವುದಿಲ್ಲ. ಅವನೂ ಅನುಭವಿಸಲಿ.



ಬೆಲೆ ಗಗನಕ್ಕೇರಿದಾಗ ಶ್ರೀಮಂತರಾಗುವ ಕನಸು ಕಂಡು ಟೊಮೆಟೊ ಬೆಳೆ ಬೆಳೆಸಿದ್ದು...ಈಗ ದರ ನೋಡಿ ಕುಸಿದು ಬಿದ್ದು!

**ಪತ್ನಿ:** ನಮ್ಮ 25ನೇ ಮದುವೆ ವಾರ್ಷಿಕೋತ್ಸವದಂದು ಮತ್ತೊಮ್ಮೆ ಮದುವೆಯಾಗೋಣ.
**ಪತಿ:** ಆಗಲಿ. ಆದರೆ ಈ ಬಾರಿ ಹಿಂದಿನ ತಪ್ಪು ಮಾಡುವುದು ಬೇಡ. ಯಾರ ಒತ್ತಾಯವೂ ಇಲ್ಲದೆ ಚೆನ್ನಾಗಿ ವಿಚಾರ ಮಾಡಿ ನಮ್ಮ ನಮ್ಮ ಜೀವನ ಸಂಗಾತಿಯನ್ನು ನಾವೇ ಆರಿಸಿಕೊಳ್ಳೋಣ.

**ಗಣಿತ ಶಿಕ್ಷಕ:** ಒಬ್ಬ ಹೆಂಗಸು ಒಂದು ಗಂಟೆಯಲ್ಲಿ 20 ರೊಟ್ಟಿಗಳನ್ನು ಮಾಡಿದರೆ, ಮೂವರು ಹೆಂಗಸರು ಅಷ್ಟೇ ಸಮಯದಲ್ಲಿ ಎಷ್ಟು ರೊಟ್ಟಿಗಳನ್ನು ಮಾಡುತ್ತಾರೆ?
**ವಿದ್ಯಾರ್ಥಿ:** ಒಂದೂ ರೊಟ್ಟಿಯನ್ನು ಮಾಡುವುದಿಲ್ಲ. ಮೂವರು ಸೇರಿ ಹರಟೆ ಹೊಡೆಯುತ್ತಾರೆ.



ಏರುತಿಹುದು ಹಾರುತಿಹುದು ನೋಡು ಎಲ್ಲಾ ಬೆಲೆಗಳು

**ವಕೀಲ:** ನಿಮ್ಮ ಪತಿ ಹತ್ಯೆಯಾಗುವ ಮೊದಲು, ಅವರು ನಿಮ್ಮೊಂದಿಗೆ ಆಡಿದ ಕೊನೆಯ ಮಾತೇನು?
**ಮಹಿಳೆ:** 'ನನ್ನ ಕನ್ನಡಕ ಎಲ್ಲಿದೆ ಸಂಗೀತಾ' ಅಂತ ಕೇಳಿದ್ದರು.
**ವಕೀಲ:** ಅವರಾಡಿದ ಕೊನೆಯ ಮಾತಿನಲ್ಲಿ ಹತ್ಯೆ ಮಾಡುವಂತಹ ವಿಷಯ ಏನಿರಲಿಲ್ಲವಲ್ಲ.
**ಮಹಿಳೆ:** ನನ್ನ ಹೆಸರು ಸಂಗೀತಾ ಅಲ್ಲ ರಜನಿ.

ಸಂಗ್ರಹ: ಮುರಲೀಧರ ಕುಲಕರ್ಣಿ, ಬೀದರ್